ಲೇಖನಗಳನ್ನು ಬರೆಯಲಾರಂಭಿಸಿದರು. 1981ರಲ್ಲಿ 'ನನ್ನ ಈ ಜನ ಒಂದಾಗಬೇಕು' ಎಂದು ಲಂಕೇಶ ಅವರು ತಮ್ಮ ಪತ್ರಿಕೆಯಲ್ಲಿ ಕರೆ ಕೊಟ್ಟಾಗ ಅದಕ್ಕೆ ಸಾರಾ ಬರೆದ ಪ್ರತಿಕ್ರಿಯೆಯೇ ಮೊದಲು ಪ್ರಕಟಗೊಂಡಿದ್ದು.

ಇವರ ಹೆಸರಿನ ಮುಂದೆ, ಹಿಂದೆ ಪ್ರಭಾವಳಿಗಳಿರಲಿಲ್ಲ. ಸಾಹಿತ್ಯ ಲೋಕಕ್ಕೆ ಅವರು ಹೆಬ್ಬಾಗಿಲಿನಿಂದಲೇ ಪ್ರವೇಶಿಸಿದರು. ಇಲ್ಲಿಂದ ಮುಂದೆ ಸಾರಾ ಹಿಂತಿರುಗಿ ನೋಡಲಿಲ್ಲ. ಅವರ ಕಾದಂಬರಿಗಳು, ಲೇಖನಗಳು ಲಂಕೇಶ ಪತ್ರಿಕೆಯಲ್ಲಿ ಪ್ರಕಟಗೊಂಡವು. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯು ಹಲವು ಭಾಷೆಗಳಿಗೆ ಅನುವಾದಗೊಂಡಿತು. ಕಾಲೇಜುಗಳಿಗೆ ಪಠ್ಯವಾಯಿತು, ಚಲನಚಿತ್ರವಾಯಿತು, ನಾಟಕವೂ ಆಯಿತು. ಹೀಗೆ ಸಾಹಿತ್ಯದಲ್ಲಿ ಪುರೋಹಿತಶಾಹಿ ಮತ್ತು ಪ್ರಭುತ್ವದ ವಿರುದ್ಧ ಪ್ರತಿಭಟನೆಯ ಧ್ವನಿಯು ಸಾರಾ ಅವರ ಕೃತಿಗಳಲ್ಲಿ ಗಟ್ಟಿಯಾಗಿ ಕೇಳಲಾರಂಭಿಸಿತು. ಆಗಲೇ ಅವರ ಕಾಲೆಳೆಯುವ, ಕೀರ್ತಿಗೆ ಮಸಿ ಬಳೆಯುವ ಕೆಲಸಗಳೂ ಆರಂಭವಾದವು.

'ಸಹನಾ', 'ವಜ್ರಗಳು', 'ಕದನವಿರಾಮ', 'ಸುಳಿಯಲ್ಲಿ ಸಿಕ್ಕವರು', 'ತಳ ಒಡೆದ ದೋಣಿಯಲಿ', 'ಪ್ರವಾಹ–ಸುಳಿ', 'ಪಂಜರ', 'ಇಳಿಜಾರು', 'ಕಾಣಿಕೆ' ಮುಂತಾದ ಕಾದಂಬರಿಗಳು; 'ಚಪ್ಪಲಿಗಳು', 'ಪಯಣ', 'ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು', 'ಖೆಡ್ಡಾ', 'ಗಗನಸಖಿ', 'ಸಂದೇಹದ ಸುಳಿಯಲ್ಲಿ', 'ಸುಮಯ್ಯಾ' (ಜಾನಪದ ಕಥೆ) ಮುಂತಾದ ಕಥಾಸಂಕಲನಗಳು; 'ಲೇಖನಗುಚ್ಛ', 'ಅನಾವರಣ', 'ಸಾಹಿತ್ಯ–ಸಂಸ್ಕೃತಿ–ಮಹಿಳೆ', 'ಚಿಂತೆ–ಚಿಂತನೆ' ಮುಂತಾದ ಲೇಖನ ಸಂಕಲನಗಳು; 'ತೇಲಾಡುವ ಮೋಡಗಳು'–ಬಾನುಲಿ ನಾಟಕ ಸಂಕಲನ; 'ಮನೋಮಿ', 'ನಾನಿನ್ನು ನಿದ್ರಿಸುವೆ', 'ಬಲೆ', 'ತುರ್ತು' 'ಪರಿಸ್ಥಿತಿಯ ಕರಾಳ ಮುಖಗಳು', 'ಮುಂಬೆಳಕು', 'ಧರ್ಮದ ಹೆಸರಿನಲ್ಲಿ', 'ಮುಸ್ಲಿಂ ಮಹಿಳೆಯರು ಮತ್ತು ತಲಾಖ್' ಮುಂತಾದ ಅನುವಾದಿತ ಕೃತಿಗಳು; 'ಹೊತ್ತು ಕಂತುವ ಮುನ್ನ' ಎಂಬ ಆತ್ಮಕಥಾನಕ; ವೈಕಂ ಮೊಹಮ್ಮದ್ ಬಶೀರ್ ಅವರ ವ್ಯಕ್ತಿ ಪರಿಚಯದ ಕೃತಿ; ಅವರ ಅಮೆರಿಕ ಪ್ರವಾಸದ ಕೃತಿ, 'ಐಷಾರಾಮದ ಆಳದಲ್ಲಿ' ಎಂಬ ಕೃತಿ; ಇಂತಹ ವೈವಿಧ್ಯಮಯವಾದ ಕೃತಿಗಳ ಜೊತೆಗೆ ಪಾಕ ವೈವಿಧ್ಯವೆಂಬ ಅಡುಗೆ ಪುಸ್ತಕವನ್ನೂ ಪ್ರಕಟಿಸಿ ಷಡ್ರಸಭರಿತವಾದ ಸವಿಯೂಟದ ರುಚಿಯನ್ನು ಉಣಬಡಿಸಿದ್ದಾರೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಪಳಗಿದ ಅವರ ಕೈ ಕವನವನ್ನೂ ರಚಿಸಿದೆ. ಕರಾವಳಿ ಲೇಖಕಿಯರ ಸಂಘ ಪ್ರಕಟಿಸಿದ 'ಕರೆ' ಕವನ ಸಂಕಲನದಲ್ಲಿ ಅದು ಪ್ರಕಟಗೊಂಡಿದೆ.

ಅವರ ಸೃಜನಶೀಲ ಬರಹಗಳಾದ ಕಥೆ, ಕವನ, ಕಾದಂಬರಿಗಳ ಬಗ್ಗೆ ಪ್ರಚಾರ ಸಿಕ್ಕಷ್ಟು ಅವರ ಸೃಜನೇತರ ಕೃತಿಗಳ ಬಗ್ಗೆ ಗಮನಹರಿದಂತಿಲ್ಲ. ಅದರಲ್ಲೂ ಅವರ ಅನುವಾದಿತ ಕೃತಿಗಳ ಬಗ್ಗೆ ಹೇಳಲೇಬೇಕು. 'ತುರ್ತು ಪರಿಸ್ಥಿತಿಯ ಕರಾಳ ಮುಖಗಳು' ಎಂಬ ಕೃತಿಯು ರಾಜನ್ ಎಂಬ ಕಾಲೇಜು ವಿದ್ಯಾರ್ಥಿಯು ಪೊಲೀಸ್ ಕಸ್ಟಡಿಯಲ್ಲಿದ್ದಾಗ ಪೊಲೀಸರ ಹಿಂಸೆಗೊಳಗಾಗಿ ಮೃತಪಟ್ಟಾಗ ಅವನ ತಂದೆ ನ್ಯಾಯಕ್ಕಾಗಿ ಹೋರಾಡಿದ ದಾರುಣ ಕಥೆಯಾಗಿದೆ. ಸಯ್ಯದ್ ಭಾಯಿಯವರು ಮರಾಠಿಯಲ್ಲಿ ಬರೆದ 'ಬಂಡೆಯ ಮೇಲೆ ಬಿತ್ತಿದ ಬೀಜ' ಎಂಬ ಕೃತಿಯನ್ನು ಅಂಜಲಿ ಪಟವರ್ಧನ್ ಅವರು ಇಂಗ್ಲಿಷಿಗೆ ಅನುವಾದ ಮಾಡಿದ್ದಾರೆ. ಅದನ್ನು ಸಾರಾ ಕನ್ನಡಕ್ಕೆ ಅನುವಾದಿಸಿದ್ದಾರೆ. ತಲಾಖಿನಿಂದ ಶೋಷಿತರಾದ ಮಹಿಳೆಯರನ್ನು ಸಂಘಟಿಸಿ ಪುರೋಹಿತಶಾಹಿಯ ವಿರುದ್ಧ ಹೋರಾಡಿದ ನೈಜ ಕಥೆಯಿದು. 'ಧರ್ಮದ ಹೆಸರಿನಲ್ಲಿ' ಎಂಬ ಕೃತಿಯು ಗುಜರಾತಿನಲ್ಲಿ ನಡೆದ ಹತ್ಯಾಕಾಂಡದ ಬಗ್ಗೆ ಪ್ರತ್ಯಕ್ಷದರ್ಶಿಯಾಗಿದ್ದ ಪೊಲೀಸ್ ಅಧಿಕಾರಿ ಕುಮಾರ್ ಎಂಬುವವರು ಬರೆದ ಕೃತಿ. ಅದನ್ನು ಸಾರಾ ಅನುವಾದಿಸಿದ್ದಾರೆ.

ಸಾರಾ ಅವರ ಸಾಮಾಜಿಕ ಕಾಳಜಿ ವ್ಯಕ್ತವಾಗುವುದು ಇಂತಹ ಕೃತಿಗಳಿಂದ. ಆಡಳಿತಶಾಹಿ ಮತ್ತು ಎಲ್ಲಾ ಧರ್ಮಗಳಲ್ಲಿರುವ ಧರ್ಮಾಂಧರಾದ ಪುರೋಹಿತಶಾಹಿಗಳ ಹಿಂಸೆ, ಶೋಷಣೆ, ದೌರ್ಜನ್ಯಗಳ ಭಯಾನಕವಾದ ಮುಖವನ್ನು ಕನ್ನಡದ ಜನತೆಗೆ ಪರಿಚಯಿಸಿದ್ದಾರೆ. ಈ ಕೆಲಸವನ್ನು ಸಾರಾ ಅವರ ಕಾಲದ ಯಾವ ಸಾಹಿತಿಗಳೂ ಮಾಡಿಲ್ಲ. ಇದರಿಂದಾಗಿ ಸಾರಾ ವಿಶಿಷ್ಟ ಸಾಹಿತಿಯಾಗಿದ್ದಾರೆ. 'ಧರ್ಮದ ಹೆಸರಿನಲ್ಲಿ' ಕೃತಿ ಬಿಡುಗಡೆಗೆ ಖ್ಯಾತ ವಕೀಲರಾದ ತೀಸ್ತಾ ಸೆಟಲ್ವಾಡ್